**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಚಿತ್ರದುರ್ಗ**

**ಸಿ.ಸಿ. 2350/2021**

| | | |
|---|---|---|
| ಸಾಕ್ಷಿದಾರರ ಹೆಸರು | ನಿರೇಶ್ ಜಿ ಲಲನ್ | PW:2 |
| ತಂದೆಯ ಹೆಸರು | ಗಿರೀಶ್ ಲಲನ್ | CW:1 |
| ವಯಸ್ಸು | 47 ವರ್ಷ | ಪ್ರಮಾಣ ವಚನ ಬೋಧಿಸಿದ ದಿನಾಂಕ : 06/05/2024 |
| ಉದ್ಯೋಗ | ಬ್ಯಾಂಕ್‌ನಲ್ಲಿ ಕೆಲಸ | |
| ವಾಸ | ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ನಾನು ಈಗ ಐ.ಡಿ.ಎಫ್.ಸಿ. ಫಸ್ಟ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಕೃತ್ಯ ನಡೆದಾಗ ಹುಬ್ಬಳಿಯಲ್ಲಿ ಐ.ಸಿ.ಐ.ಸಿ.ಐ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಆಗ ನಾನು ಐ.ಸಿ.ಐ.ಸಿ.ಐ ಬ್ಯಾಂಕ್‌ನಲ್ಲಿ ಕ್ಲಸ್ಟರ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ಕ್ಲಸ್ಟರ್ ಎಂದರೆ 5 ರಿಂದ 6 ಜಿಲ್ಲೆಯ ಬ್ಯಾಂಕಿನ ಬ್ರಾಂಚಸ್ ಕೂಡಿದಾಗ ಅದನ್ನು ಕ್ಲಸ್ಟರ್ ಎಂದು ಕರೆಯುತ್ತೇವೆ. 5 ರಿಂದ 6 ಜಿಲ್ಲೆ ಎಂದರೆ ಸರ್ಕಾರದಿಂದ ಮಾಡಿದ ಜಿಲ್ಲೆ ಅಲ್ಲ, ನಾವೆ ನಮ್ಮ ಬ್ಯಾಂಕಿನ ರೂಲ್ಸ್ ಪ್ರಕಾರ ನಮಗೆ ಇಷ್ಟವಾದ 5 ರಿಂದ 6 ಜಿಲ್ಲೆಗಳಿಂದ ಮಾಡಿಕೊಂಡಿರುತ್ತೇವೆ. ಚಿತ್ರದುರ್ಗದ ಐ.ಸಿ.ಐ.ಸಿ.ಐ ಬ್ಯಾಂಕ್ ಕೂಡ ಆಗ ಆ ಕ್ಲಸ್ಟರ್ ನಲ್ಲಿ ಸೇರಿತ್ತು.

2. ನಮ್ಮ ಬ್ಯಾಂಕ್‌ನಲ್ಲಿ ಲೋನ್ ಕೊಡುವುದು, ಸೇವಿಂಗ್ಸ್ ಡಿಪಾಸಿಟ್ ಮಾಡುವುದು, ಎಫ್.ಡಿ. ಮಾಡುವುದು, ಗೋಲ್ಡ್ ಲೋನ್ ಕೊಡುವುದು ನಮ್ಮ ಬ್ಯಾಂಕ್ ಇಷ್ಟೆಲ್ಲಾ ಸೌಲಭ್ಯ ಕೊಡುತ್ತಿತ್ತು. ಗೋಲ್ಡ್ ಲೋನ್ ಕೊಡುವಾಗ ಬಂಗಾರವನ್ನು ಪರಿಣಿತರೊಂದಿಗೆ ಅಪ್ರೈಸರ್ ಸ್ಟೇಟ್‌ಮೆಂಟ್ ಮಾಡಿಕೊಳ್ಳುತ್ತಾರೆ, ನಂತರ ಬಂಗಾರವನ್ನು ನಮ್ಮ ಬ್ಯಾಂಕ್‌ನಲ್ಲಿ ಅಡ ಇಟ್ಟುಕೊಂಡು ಹಣವನ್ನು ಕಸ್ಟಮರ್‌ಗೆ ಕೊಡುತ್ತೇವೆ. ಈ ಕೇಸಿನ 1 ನೇ ಆರೋಪಿಯಾದ

ನವೀನ್ ಕುಮಾರ್ ಇವರು ಟೆಲ್ಲರ್ ಮತ್ತು ಕ್ಲಿಯರಿಂಗ್ ಆಫೀಸರ್ ಆಗ ಆಗಿದ್ದರು ಮತ್ತು ಗೋಲ್ಡ್ ಕಸ್ಟೋಡಿಯನ್ ಆಗಿದ್ದರು. ಅವರ ಹತ್ತಿರ ವಾಲ್ಟ್ ಮತ್ತು ಕೀ ಯನ್ನು ಇಟ್ಟುಕೊಂಡಿದ್ದರು. 1 ನೇ ಆರೋಪಿ ಕಸ್ಟೋಡಿಯನ್ ಆಫೀಸರ್ ಆಗಿದ್ದರು.

3. 2 ನೇ ಆರೋಪಿ ಶ್ರೀರಂಗ ಭೀಮಸೇನ್ ಮುಜೋದರ್ ಇವರು ಬ್ರಾಂಚ್ ಆಪರೇಷನ್ ಮ್ಯಾನೇಜರ್ ಆಗಿದ್ದರು, ಇವರು ಕೂಡ ಕಸ್ಟೋಡಿಯನ್ ಆಫೀಸರ್ ಆಗಿದ್ದರು. ಇವರ ಹತ್ತಿರವೂ ಕೂಡ ವಾಲ್ಟ್ ಮತ್ತು ಕೀ ಯನ್ನು ಇಟ್ಟುಕೊಂಡಿದ್ದರು. ಇವರು ಇಬ್ಬರು ಅಪ್ರೈಸರ್ ಹತ್ತಿರ ಬಂಗಾರವನ್ನು ಪರಿಶೀಲಿಸಿ ಲೋನ್ ಸ್ಯಾಂಕ್ಷನ್ ಮಾಡುತ್ತಿದ್ದರು.

4. 3 ನೇ ಆರೋಪಿ ರಮೇಶ್ ಇವರು ಡಿ.ಎಸ್.ಎ. ಎಂದರೆ ಸೇಲ್ಸ್ ಏಜೆನ್ಸಿಯ ಎಕ್ಸಿಕ್ಯೂಟೀವ್ ಆಫೀಸರ್ ಆಗಿದ್ದರು. ಹಣ ಯಾರಿಗಾದರೂ ಬೇಕಿದ್ದ ಪಕ್ಷದಲ್ಲಿ ಇವರು ಕಸ್ಟಮರ್‌ಗಳನ್ನು ಗುರುತಿಸಿ ಗೋಲ್ಡ್ ಲೋನ್ ಪಡೆಯುವವರು ಒಪ್ಪಿಗೆ ಇದ್ದ ಪಕ್ಷದಲ್ಲಿ ಇವರು ನಮ್ಮ ಬ್ಯಾಂಕಿಗೆ ತರುತ್ತಿದ್ದರು. ಡಿ.ಎಸ್.ಎ. ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಇತ್ತು.

5. ಗೋಲ್ಡ್ ಲೋನ್ ಹೊರತುಪಡಿಸಿ ಬೇರೆ ಲೋನ್ ಕೂಡ ನಮ್ಮ ಬ್ಯಾಂಕ್‌ನವರು ಕೊಡುತ್ತಿದದರು. 4 ನೇ ಆರೋಪಿ ಗೋಲ್ಡ್ ಲೋನ್ ಕೊಡುವ ಮೊದಲು ಮೇಲ್ವಿಚಾರಣೆ ಮಾಡಿ, ಆಡಿಟ್ ಮಾಡುತ್ತಿದ್ದರು. ಗೋಲ್ಡ್ ಲೋನ್ ಪಡೆಯುವಾಗ ಹಲವಾರು ಅಡಿಟ್ ಅಗುತ್ತದೆ. ಸರ್‌ಪ್ರೈಸ್ ಆಡಿಟ್ ಮತ್ತು ಗೋಲ್ಡ್ ಲೋನ್ ಟೀಂ ಸರಪ್ರೈಸ್ ಆಡಿಟ್ ಆಗುತ್ತದೆ. ಗೋಲ್ಡ್ ಲೋನ್ ಟೀಂ ಎಂದರೆ ಗೋಲ್ಡ್ ಲೋನ್‌ನ ಟೀಂನ ಸದಸ್ಯರು ಸರ್‌ಪ್ರೈಸ್ ಆಡಿಟ್ ಮಾಡುತ್ತಾರೆ. ಸರ್‌ಪ್ರೈಸ್ ಆಡಿಟ್ ಯಾರು ಮಾಡುತ್ತಾರೆ ನಮಗೆ ಗೊತ್ತಿಲ್ಲ, ಕಾರಣ ಅದರು ಸರಪ್ರೈಸ್ ಆಡಿಟ್ ಆಗಿರುತ್ತದೆ. ಈ ಕೇಸಿನ ಸರ್‌ಪ್ರೈಸ್ ಗೋಲ್ಡ್ ಲೋನ್ ಆಡಿಟ್ ಫೆಬ್ರವರಿ 2012 ರಲ್ಲಿ ಆಗಿರುತ್ತದೆ.

6. 77 ಗೋಲ್ಡ್ ಲೋನ್ ಅಕೌಂಟ್ಸ್‌ಗಳಲ್ಲಿ 12 ಗೋಲ್ಡ್ ಲೋನ್ ಕ್ಲೋಸ್ ಆಗಿದ್ದವರು. 28 ಗೋಲ್ಡ್ ಲೋನ್ ಪ್ಯಾಕೇಟ್ಸ್‌ಗಳು ಮಿಸ್ಸಿಂಗ್ ಆಗಿದ್ದವು. 28 ಗೋಲ್ಡ್ ಲೋನ್ ಪ್ಯಾಕೇಟ್ಸ್ ಗಳು ಮಿಸ್ ಆಗಿದ್ದರಿಂದ ಗೋಲ್ಡ್ ಲೋನ್ ಟೀಂ ರವರು ಎಲ್ಲಾ ಲೋನ್ ಅಕೌಂಟ್ಸ್ ಬಗ್ಗೆ ಅವರು ಆಡಿಟ್ ಚೆಕ್ ಮಾಡಿದರು. ಆಡಿಟ್ ಮಾಡಿದಾಗ 34 ಗೋಲ್ಡ್ ಲೋನ್ ಪ್ಯಾಕೇಟ್ ಮಿಸ್ ಅಗಿರುವುದು ತಿಳಿಯಿತು. ಆಗ 34 ಗೋಲ್ಡ್ ಲೋನ್ ಪ್ಯಾಕೇಟ್ ಮಿಸ್ ಆಗಿದ್ದ ಬಗ್ಗೆ ನಮ್ಮ ಬ್ಯಾಂಕ್‌ನವರು ಕೂಡ ತನಿಖೆ ಮಾಡಿದರು, ಆಗ 13 ಗೋಲ್ಡ್ ಲೋನ್ ಅಕೌಂಟ್ಸ್ ಗಳಲ್ಲಿ ಸರಿಯಾದ ಕೆ.ವೈ.ಸಿ. ದಾಖಲೆಗಳು ಇರಲಿಲ್ಲ ಅಂದರೆ ಸರಿಯಾದ ವಿಳಾಸ ಇಲ್ಲದ ದಾಖಲೆಗಳು, ಐ.ಡಿ. ಪ್ರೂಫ್ ಇಲ್ಲದ ದಾಖಲೆಗಳು ಆಗಿದ್ದವು, ಒಂದು ಗೋಲ್ಡ್ ಲೋನ್ ಅಕೌಂಟ್ ಮೃತ ವ್ಯಕ್ತಿಗೆ ನೀಡಿರುವುದಾಗಿ ಗೊತ್ತಾಯಿತು. 34 ಗೋಲ್ಡ್ ಲೋನ್ ಪ್ಯಾಕೇಟ್ ನಮ್ಮ ಬ್ಯಾಂಕ್‌ನವರು ಸರಿಯಾಗಿ ಕಸ್ಟಮರ್ ನೀಡಿದ ದಾಖಲೆ ಪರಿಶೀಲಿಸಿದಾಗ ಆ ವ್ಯಕ್ತಿಗಳು ಅವರು ನೀಡಿದ ವಿಳಾಸದಲ್ಲಿ ಇರಲಿಲ್ಲ ಮತ್ತು ನಾವು ಅವರ ವಿಳಾಸ ಕೂಡ ಪತ್ತೆ ಮಾಡಿದರು ಸಿಕ್ಕಿರುವುದಿಲ್ಲ ಆದ್ದರಿಂದ ಈ 34 ಗೋಲ್ಡ್ ಲೋನ್ ಪ್ಯಾಕೇಟ್‌ಗಳ ದಾಖಲೆಗಳನ್ನು ಸೃಷ್ಠಿ ಮಾಡಿ ಲೋನ್ ಪಡೆದಿರುತ್ತಾರೆ.

7. ಡಿಸೆಂಬರ್ 2011 ರಲ್ಲಿ ನಮ್ಮ ಬ್ಯಾಂಕಿನ ರೀಜಿನಲ್ ರಿಸ್ಕ್ ಮ್ಯಾನೇಜ್‌ಮೆಂಟ್ ರವರು ಪರಿಶೀಲಿಸಿದಾಗ ಎಲ್ಲಾ 34 ಗೋಲ್ಡ್ ಲೋನ್ ಪ್ಯಾಕೇಟ್‌ಗಳು ಬ್ಯಾಂಕಿನ ವಾಲ್ಟ್‌ನಲ್ಲಿ ಇದ್ದವು. ಆಗ ಆ 34 ಗೋಲ್ಡ್ ಲೋನ್ ಪ್ಯಾಕೇಟ್‌ಗಳನ್ನು ಬ್ರಾಂಚ್ ಆಪರೇಷನ್ ಮ್ಯಾನೇಜರ್ ಅದ 2 ನೇ ಆರೋಪಿ ಮತ್ತು ಆಡಿಟರ್ ಸಹಿಗಳು ಇದ್ದವು. ಈ ರಿಪೋರ್ಟ್ ಕೂಡ ಫೈಲ್‌ನಲ್ಲಿ ಇರಲಿಲ್ಲ. ಈ 34 ಗೋಲ್ಡ್ ಲೋನ್ ಪ್ಯಾಕೇಟ್‌ಗಳ ಗೋಲ್ಡ್ ಲೋನ್ ಹಣ ಒಟ್ಟು ರೂ.1,58,74,574/ ಆಗಿತ್ತು.

8. ಇದೆಲ್ಲಾ ರಿಪೋರ್ಟ್ ಬಂದ ಮೇಲೆ ನಮ್ಮ ಬ್ಯಾಂಕ್‌ನ ಫ್ರಾಡ್ ಮತ್ತು ರಿಸ್ಕ್ ಇನ್ವೆಸ್ಟಿಗೇಷನ್ ಟೀಂ ರವರು ತನಿಖೆ ಮಾಡಿದಾಗ ಈ ಪ್ರಕರಣದಲ್ಲಿ ಇನ್ನೂ ಮೂರು ಜನ ಭಾಗಿಯಾಗಿದ್ದಾರೆ ಎನ್ನುವ ಬಗ್ಗೆ ತಿಳಿದುಬಂದಿರುತ್ತದೆ. ಸದರಿ ಮೂರು ಜನ ಅಂದರೆ 5 ನೇ ಆರೋಪಿ ಪ್ರವೀಣ್ ತಿಕಾರೆ, ಬ್ರಾಂಚ್ ಮ್ಯಾನೇಜರ್, 7 ನೇ ಆರೋಪಿ ಆರಿಫ್‌ವುಲ್ಲಾ,

ಡಿ.ಎಸ್.ಎ. ಮಾಲೀಕ, ಮತ್ತು 6 ನೇ ಆರೋಪಿಯಾದ ಎಸ್.ಕೆ.ಪ್ರದೀಪ್ ಕುಮಾರ್, ಗೋಲ್ಡ್ ಅಪ್ರೈಸರ್ ಇದ್ದರು. 4 ಮತ್ತು 5 ನೇ ಆರೋಪಿತರು 15 ದಿನಗಳಿಗೊಮ್ಮೆ ಗೋಲ್ಡ್ ಲೋನ್ ಬಗ್ಗೆ ಮತ್ತು ಎಲ್ಲಾ ದಾಖಲೆಗಳ ಬಗ್ಗೆ ಸರಪ್ರೈಸ್ ಆಡಿಡ್ ಮಾಡುತ್ತಾರೆ. 6 ನೇ ಆರೋಪಿ ಅಪ್ರೈಸರ್ ಆಗಿದ್ದು ಅವರು ಬಂಗಾರದ ಕ್ವಾಲಿಟಿ, ಕ್ವಾಂಟಿಟಿ ಮತ್ತು ವ್ಯಾಲ್ಯು ಮಾಡಬೇಕು. 6 ನೇ ಆರೋಪಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸ ಮಾಡುತ್ತಿದ್ದರು. 6 ನೇ ಆರೋಪಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರಲಿಲ್ಲ, ಆದರೆ ಯಾರಿಗಾದರೂ ಗೋಲ್ಡ್ ಲೋನ್ ಬೇಕು ಎಂದಾರ ಅವರು ಬಂಗಾರವನ್ನು ಪರಿಶೀಲಿಸಿ, ಕ್ವಾಲಿಟಿ, ಕ್ವಾಂಟಿಟಿ ಮತ್ತು ವ್ಯಾಲ್ಯು ಮಾಡಿ ಅಪ್ರೈಸರ್ ಸ್ಟೇಟ್‌ಮೆಂಟ್ ನೀಡುತ್ತಿದ್ದರು. 7 ನೇ ಆರೋಪಿ ಡಿ.ಎಸ್.ಎ. ಮಾಲೀಕ. 3 ನೇ ಆರೋಪಿ ರಮೇಶ್ ಇವರು 7 ನೇ ಆರೋಪಿ ಆರೀಫ್‌ಉಲ್ಲಾ ರವವರಿಗೆ ವರದಿ ಮಾಡಬೇಕು. 7 ನೇ ಆರೋಪಿಯ ಕೆಲಸ ಅಂದರೆ ಯಾರಿಗಾದರೂ ಗೋಲ್ಡ್ ಲೋನ್ ಬೇಕು ಎಂದಾಗ ಅವರು ಕಸ್ಟಮರ್ ಗಳನ್ನು ಬ್ಯಾಂಕಿಗೆ ಕರೆಸುತ್ತಿದ್ದರು, ಬಂಗಾರವನ್ನು ತೆಗೆದುಕೊಂಡು ಅಪ್ರೈಸರ್ ಹತ್ತಿರ ಕೊಟ್ಟು ಅಪ್ರೈಸರ್ ಸ್ಟೇಟ್‌ಮೆಂಟ್ ಪಡೆಯುತ್ತಿದ್ದರು, ಬಂಗಾರದ ದಾಖಲೆಗಳನ್ನು ಪರಿಶೀಲಿಸುತ್ತಿದ್ದರು. ನಂತರ ದಾಖಲೆಗಳು ಸರಿ ಇದ್ದ ಪಕ್ಷದಲ್ಲಿ ಹಾಗೂ ಅಪ್ರೈಸರ್ ಸ್ಟೇಟ್‌ಮೆಂಟ್ ನೀಡಿದ ನಂತರ ಅವರು ಲೋನ್ ಮಂಜೂರು ಮಾಡಿಸುತ್ತಿದ್ದರು.

9. ಒಂದು ಭಾರಿ ಬ್ಯಾಂಕ್ ನವರ ಹತ್ತಿರ 100 ಗ್ರಾಂ ಗೋಲ್ಡ್ ಕಾಯಿನ್ ಇದ್ದಿದ್ದು ಆಗ ಕಸ್ಟಮರ್ ರವರ ಹತ್ತಿರ ಅಷ್ಟು ಹಣ ಇರಲಿಲ್ಲ, ಆಗ ಬ್ಯಾಂಕಿನವರು ಗೋಲ್ಡ್ ಕಾಯಿನ್ ಕಸ್ಟಮರ್‌ರವರಿಗೆ ಅಡ ಇಟ್ಟಂತೆ ತೋರಿಸಿ ಹಣವನ್ನು ಮಂಜೂರು ಮಾಡಿ ಅದೇ ಗೋಲ್ಡ್ ಕಾಯಿನ್ ಖರೀದಿಸಿದಂತೆ ತೋರಿಸಿರುತ್ತಾರೆ. ಈ ಬಗ್ಗೆ ನಮ್ಮ ಬ್ಯಾಂಕಿನ ಇನ್ವೆಸ್ಟಿಗೇಷನ್ ರವರು ಇನ್ವಿಸ್ಟಿಗೇಷನ್ ಮಾಡಿದಾಗ ಈ ತರಹ ಮೋಸ ಮಾಡಿದ ಬಗ್ಗೆ ತಿಳಿದಿರುತ್ತದೆ.

10. ಸಾಕ್ಷಿ ನಿಪಿ.1 ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಾನು ಠಾಣೆಗೆ ಹೋಗಿ ಎರಡು ಭಾರಿ ಮುಂದುವರೆದ ಹೇಳಿಕೆ ನೀಡಿರುತ್ತೇನೆ. ನಾನು ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸಾಕ್ಷಿ ದೂರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ.2 ಎಂದು,

**PW:2**

ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಎಲ್ಲಾ ಆರೋಪಿತರು ಬ್ಯಾಂಕಿಗೆ ಮೋಸ ಮಾಡಿರುತ್ತಾರೆ.

**ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಆದರೆ ಈ ಕೇಸಿನಲ್ಲಿ ಕ್ರಿಮಿನಲ್ ಪೆಟಿಷನ್ ನಂ.6490/2022 ರ ನಿರ್ಧೇಶನದಂತೆ ಮೂರು ತಿಂಗಳಲ್ಲಿ ಕೇಸನ್ನು ವಿಲೇವಾರಿ ಮಾಡಬೇಕು ಎಂದು ಆದೇಶ ಇರುತ್ತದೆ, ಆದ್ದರಿಂದ ವಕೀಲರ ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**